# ಸಂಪೂರ್ಣ ಬೋಧನಾಶಾಸ್ತ್ರ

## ಕನ್ನಡ ಬೋಧನಾ ಶಾಸ್ತ್ರದ ಮೇಲೆ ಕೇಳಬಹುದಾದ ಪ್ರಶ್ನೆಗಳು – ಪುನರಾವರ್ತನೆ

---

**ಕನ್ನಡ ಪ್ರಥಮ ಭಾಷೆ, ದ್ವಿತೀಯ ಭಾಷೆ ಪತ್ರಿಕೆ – ೧ ಮತ್ತು ಪತ್ರಿಕೆ – ೨ ಕ್ಕೂ ಸಂಬಂಧಿಸಿದಂತೆ**

---

### ಭಾಷೆ ಮೇಲೆ ಕೇಳಬಹುದಾದ ವ್ಯಾಖ್ಯೆಗಳು

### ಪತ್ರಿಕೆ – II

### ಪ್ರಥಮ ಭಾಷೆ – ಕನ್ನಡ

- ಮನುಷ್ಯನ ಯೋಚನೆಗಳನ್ನು ಅಭಿವ್ಯಕ್ತಗೊಳಿಸುವ ಸಲುವಾಗಿ ಇರುವ ಒಂದು ಶಬ್ದ ಸಂಯೋಜನಾ ಮಾಧ್ಯಮವೇ ಭಾಷೆ – ಆಕ್ಸ್ ಫರ್ಡ್ ನಿಘಂಟು **(KARTET 2019)**
- ಭಾಷೆಯನ್ನು ಎನ್ನುವುದು ಅಭಿಪ್ರಾಯಗಳ ಅಭಿವ್ಯಕ್ತಿಯ ಒಂದು ವಿಧಾನ ಅಲ್ಲ. ಅದೊಂದು ರೀತಿಯ ಆಲೋಚನೆ ಎಂದು ಹೇಳಿದವರು – ಎರ್ದಮನ್ **(KARTET 2019)**
- ಕ್ರಮವಾದ ಬರವಣಿಗೆಯನ್ನು ಕಲಿಸುವ ಮುಂಚೆ ಚಿತ್ರಗಳನ್ನು ಬರೆಯುವುದನ್ನು ಕಲಿಯಿರಿ ಎಂದು ಹೇಳಿದವರು - ಮಹಾತ್ಮ ಗಾಂಧೀಜಿ **(KARTET 2017)**

### ದ್ವಿತೀಯ ಭಾಷೆ – ಕನ್ನಡ

- ವ್ಯಾಕರಣದಿಂದ ಪದ ಸಿದ್ದಿ, ಪದ ಸಿದ್ಧಿಯಿಂದ ಅರ್ಥ, ಅರ್ಥದಿಂದ ತತ್ವಜ್ಞಾನ, ತತ್ವಜ್ಞಾನದಿಂದ ಮಾನವರು ಬಯಸುವ ಮೋಕ್ಷ ದೊರೆಯುತ್ತದೆ ಎಂದು ವ್ಯಾಕರಣದ ಮಹತ್ವ ಸಾರಿದವರು – ಕೇಶಿರಾಜ **(KARTET 2019)**


DOWNLOAD KARNATAKA ACADEMY APP – CONTACT – Mrs. IMAMSAB MULTANI
9980877296
KARNATAKA ACADEMY 9980877296

**ಪತ್ರಿಕೆ – I**

## ದ್ವಿತೀಯ ಭಾಷೆ – ಕನ್ನಡ

- ಸಮಾಜದ ಸಂಪರ್ಕಕ್ಕಾಗಿ ಇರುವ ಯಾದೃಚ್ಛಿಕ ಮೌಖಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ ಎಂದು ಹೇಳಿದವರು – ಬ್ಲಾಕ್ ಮತ್ತು ಟ್ರೇಗರ್ (KARTET 2019)
- ಮಕ್ಕಳು ಶಿಕ್ಷಣವನ್ನು ಮಾತೃ ಭಾಷೆಯ ಮಾಧ್ಯಮದ ಮೂಲಕ ಪಡೆಯದಿದ್ದರೆ ತಮ್ಮ ಗೋರಿಯನ್ನು ತಾವೇ ನಿರ್ಮಿಸಿಕೊಂಡಂತೆ ಎಂದು ಒಪ್ಪಿಕೊಳ್ಳುತ್ತೇನೆ - ಈ ಹೇಳಿಕೆ ನೀಡಿದವರು - ಮಹಾತ್ಮ ಗಾಂಧೀಜಿ.

## ಪ್ರಥಮ ಭಾಷೆ – ಕನ್ನಡ

- ಮಾನವನು ವಸ್ತುಗಳ ಮತ್ತು ಪ್ರಾಣಿ-ಪಕ್ಷಿಗಳ ಶಬ್ದಗಳನ್ನು ಅನುಕರಿಸಲು ಮಾಡಿದ ಪ್ರಯತ್ನವೇ ಭಾಷೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು – ಲಿಬ್ನಿಜ್ (KARTET 2017)

## ನನ್ನ ಅಂದಾಜು ಗಣನೆಯಲ್ಲಿರುವ ವ್ಯಾಖ್ಯೆಗಳು

- ಧ್ವನಿ ಸಂಕೇತಗಳಿಂದ ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಸಾಧನವೇ ಭಾಷೆ – ಪ್ಲೇಟೋ
- ಆತ್ಮವಿರುವ ಅಥವಾ ಮನಸ್ಸಿರುವ ಯಾವುದೇ ಪ್ರಾಣಿಯ ಅನುಭವಗಳ ಅಭಿವ್ಯಕ್ತಿಯೇ ಭಾಷೆ – ಐಸ್ಲರ್
- ಒಂದು ಚಿತ್ತ ಸ್ಥಿತಿಯನ್ನು ವ್ಯಕ್ತಪಡಿಸಲು ಮಾಡುವ ಉದ್ದೇಶಪೂರ್ವಕ ಧ್ವನಿಗಳ ಉಚ್ಚಾರಣೆಯೇ ಭಾಷೆ – ಮಾರ್ಟಿ
- ಮನುಷ್ಯನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಧ್ವನಿ ಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ - ಫರ್ಡಿನಾಂಡ್ ಡಿ. ಸಸೂರ್
- ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ (ಅಂದರೆ ಇಚ್ಛೆಯನ್ನು ಅವಲಂಬಿಸಿರುವುದು) ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ – ಈ.ಎಚ್. ಸ್ಟೂರ್ಟವಾಂಟ್



DOWNLOAD KARNATAKA ACADEMY APP – CONTACT – Mrs. IMAMSAB MULTANI
9980877296

KARNATAKA ACADEMY 9980877296

- ತಮ್ಮ ಭಾವ – ಭಾವನೆಗಳನ್ನು – ಭಾವಾವೇಶಗಳನ್ನು ಬಯಕೆಗಳನ್ನು ಸ್ವಪ್ರೇರಿತ ಧ್ವನಿ ಸಂಕೇತಗಳಿಂದ ಮನುಷ್ಯರು ಇನ್ನೊಬ್ಬರಿಗೆ ತಿಳಿಸುವ ವಿಧಾನವೇ ಭಾಷೆ – ಎಡ್ವರ್ಡ್ ಸಫೀರ್
- ಸೀಮಿತವಾದ ವ್ಯವಸ್ಥಿತ ಶಬ್ದ ಸಮುದಾಯವನ್ನು ಒಳಗೊಂಡ ಅಭಿವ್ಯಕ್ತಿಗೆ ಕಾರಣವಾಗುವ ಮಾಧ್ಯಮವೇ ಭಾಷೆ – ಕ್ರೋಚೆ
- ಪದಗಳೆಂಬ ನಾಣ್ಯಗಳ ಮೂಲಕ ನಮ್ಮೊಳಗಿನ ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗುವ ಸಾಧನವೇ ಭಾಷೆ – ಕಿಲ್ಲರ್ ಕೌಚ್
- ಭಾಷೆ ಎಂಬುದೊಂದು ಬಗೆಯ ಸಂಕೇತ – ವೆನ್ರಿಚ್

## ಇನ್ನಿತರ ಪ್ರಮುಖ ಅಂಶಗಳು

- ಭಾಷೆಯ ರಚನೆಯ ನಿಯಮ ಮತ್ತು ಪ್ರಯೋಗವನ್ನು ಕುರಿತು ಅಧ್ಯಯನ ಮಾಡುವುದು – ವ್ಯಾಕರಣಶಾಸ್ತ್ರ (KARTET - P1 – 2019)
- ಭಾಷೆಯ ಪ್ರಾವಿಣ್ಯತೆ ಎಂದರೆ – ಭಾಷಾ ಕೌಶಲಗಳಲ್ಲಿ ಪ್ರಬುದ್ಧತೆ ಪಡೆಯುವುದು. (KARTET -P1 – 2019)
- ಭಾಷಾ ಬೋಧನೆಯಲ್ಲಿ ಪದ ಮಾಲಾ ಪದ್ಧತಿ ಎಂದರೆ – ಪದಗಳನ್ನು, ಪದಗಳ ಉಚ್ಚಾರಣೆ ಮತ್ತು ಅರ್ಥವನ್ನು ತಿಳಿಸಿ ಕೊಡುವುದರ ಮೂಲಕ ಓದು ಕಲಿಸುವುದು.
- ಭಾಷಾ ಕಲಿಕೆ ಮತ್ತು ಬೋಧನೆಯ ಮನೋವೈಜ್ಞಾನಿಕ ನಿಯಮಗಳ ಸರಿಯಾದ ಅನುಕ್ರಮ
    1. ಸಿದ್ಧತಾ ನಿಯಮ
    2. ಅನುಕರಣ ನಿಯಮ
    3. ಅಭ್ಯಾಸ ನಿಯಮ
    4. ಪುನರ್ಬಲನ ನಿಯಮ
- ರೂಪಾಂತರ ಎಂದರೆ - ಒಂದು ಭಾಷೆಯೊಳಗೆ ನಡೆಯುವ ಪರಿವರ್ತನೆ.
- ಬೋಧನಾ ಪದ್ಧತಿ ಎಂದರೆ - ಕಲಿಕೆಯನ್ನು ಸುಲಭ ಮತ್ತು ಪರಿಣಾಮಕಾರಿ ಮಾಡಲು ಶಿಕ್ಷಕರು ಅನುಸರಿಸುವ ಮಾರ್ಗ.
- ಮಕ್ಕಳ ಭಾಷಾ ಕಲಿಕೆಯ ಮೂಲ ಕೌಶಲ – ಆಲಿಸುವಿಕೆ



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

- ಭಾಷಾಕಲಿಕೆಯ ಪ್ರಾರಂಭ ಮತ್ತು ಅದು ಬಲಗೊಳ್ಳುವುದು ಭಾಷಾ ಬೋಧನೆಯ ತತ್ವಗಳಿಂದ - ಸಿದ್ಧತಾ ತತ್ವ ಮತ್ತು ಅಭ್ಯಾಸ ತತ್ವ
- ಭಾಷೆಯ ಕಲಿಕೆಯಲ್ಲಿ ವಾಕ್ಯ ಪದ್ಧತಿ ಎಂದರೆ - ಅರ್ಥಪೂರ್ಣ ವಾಕ್ಯಗಳನ್ನು ಮಕ್ಕಳಿಗೆ ಪರಿಚಯಿಸುತ್ತಾ ಓದು ಕಲಿಸುವುದು.
- ಓದುವಿಕೆ ಒಂದು ಆಲೋಚನೆ ಕ್ರಿಯೆಯಾಗಿರುತ್ತದೆ ಎಂದರೆ - ಮಾನಸಿಕ ಸಿದ್ಧತೆ, ಆಸಕ್ತಿ, ಪ್ರಚೋದನೆ, ಏಕಾಗ್ರತೆ, ಅರ್ಥಗ್ರಹಿಕೆ, ಕಲ್ಪನೆ, ಸ್ಮರಣೆ ಮತ್ತು ಯೋಚನಾ ಕೌಶಲ್ಯ ಸಮನ್ವಯ ಗೊಂಡಿರಬೇಕು.

- ಪರಿಣಾಮಕಾರಿ ಮತ್ತು ಯಶಸ್ವಿ ತರಗತಿ ಬೋಧನೆಗೆ ಯೋಜನೆಯ ಹಂತಗಳು ಕ್ರಮಬದ್ಧ ವಿಧಾನ
    1. ಪೂರ್ವ ಸಿದ್ಧತಾ ಹಂತ
    2. ಗುರಿ ನಿರೂಪಣೆ ಹಂತ
    3. ಬೆಳವಣಿಗೆಯ ಹಂತ
    4. ಪುನರಾವರ್ತನೆ
    5. ಗೃಹ ಕೆಲಸ
- ಓದುಗಾರಿಕೆ ಕಲಿಸುವ ಪದ್ಧತಿಗಳು ಕ್ರಮವಾಗಿ ಹೇಗಿರುತ್ತವೆ ?
    1. ವರ್ಣಮಾಲಾ ಪದ್ಧತಿ
    2. ಪದ ಮಾಲಾ ಪದ್ಧತಿ
    3. ನೋಡಿ ಹೇಳುವ ಪದ್ಧತಿ
    4. ವಾಕ್ಯ ಪದ್ಧತಿ
- ಭಾಷಾ ಮೌಲ್ಯಮಾಪನದಲ್ಲಿ ವಸ್ತುನಿಷ್ಠ ಮಾದರಿ ಪ್ರಶ್ನೆಗಳನ್ನು ಅಳವಡಿಸುವ ಪ್ರಮುಖ ಉದ್ದೇಶ - ಮಕ್ಕಳ ಜಾಣ್ಮೆ, ಬುದ್ಧಿಶಕ್ತಿ, ಆಲೋಚನೆ ಶಕ್ತಿ, ಸ್ಮರಣಶಕ್ತಿ ಮಾಪನ
- ವಾಕ್ಯವು ಭಾವನೆಯ ಒಂದು ಅಂಶ. ವಾಕ್ಯವನ್ನು ವ್ಯಾಕರಣವು ಅಧ್ಯಯನ ಮಾಡುವುದು ಆದ್ದರಿಂದ ವ್ಯಾಕರಣ ಶಾಸ್ತ್ರವನ್ನು ಹೀಗೂ ಕರೆಯುವರು - ಭಾವನಾ ಶಾಸ್ತ್ರ.


DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

- ಮಕ್ಕಳ ಭಾಷಾ ಕಲಿಕೆಯ ಆರಂಭದಲ್ಲಿ ಈ ಅಂಶವನ್ನು ಹೆಚ್ಚು ಪರಿಗಣಿಸುವ ಅಗತ್ಯವಿಲ್ಲ – ಮಕ್ಕಳ ಭಾಷಾ ಶುದ್ಧತೆಗೆ ಒತ್ತು ನೀಡುವುದು.
- ಭಾಷಾ ಶಿಕ್ಷಣದಲ್ಲಿ ವ್ಯಾಕರಣ ಬೋಧಿಸಲು ಸೂಕ್ತ ಕ್ರಮ - ವ್ಯಾಕರಣಾಂಶಗಳು ಸಾಂದರ್ಭಿಕ ಪರಿಚಯ ಮತ್ತು ಅನ್ವಯ.
- ಕಲಿಕಾ ಪ್ರಕ್ರಿಯೆಯೊಂದಿಗೆ ವ್ಯಾಕರಣವನ್ನು ಸಮನ್ವಯಗೊಳಿಸಿ ಕಲಿಸುವುದು - ಕ್ರಿಯಾತ್ಮಕ ವ್ಯಾಕರಣ
- ತರಗತಿಯ ಭಾಷಾ ಕಲಿಕೆಯು ಮುಖ್ಯವಾಗಿ ಹೀಗಿರಬೇಕು - ರಚನಾತ್ಮಕ ಅಭ್ಯಾಸಗಳ ಮೂಲಕ ಕಲಿಕೆ ಯಾಗಬೇಕು.
- ಭಾಷಾ ಮೌಲ್ಯಮಾಪನದಲ್ಲಿ ಪ್ರಬಂಧ ಮಾದರಿ ಪ್ರಶ್ನೆಗಳನ್ನು ಅಳವಡಿಸುವ ಪ್ರಮುಖ ಉದ್ದೇಶ - ಸ್ವತಂತ್ರ ಅಭಿವ್ಯಕ್ತಿ ಸಾಮರ್ಥ್ಯ ಮಾಪನ
- ಒಂದು ಭಾಷೆಯನ್ನು ಕಲಿಯುವ ಸರಿಯಾದ ಕ್ರಮ
  1. ಆಲಿಸುವುದು
  2. ಮಾತನಾಡುವುದು
  3. ಓದುವುದು
  4. ಬರೆಯುವುದು
- ಮಕ್ಕಳು ಸಹಜವಾಗಿ ಭಾಷೆಯನ್ನು ಇದರ ಮೂಲಕ ಕಲಿಯುತ್ತಾರೆ - ಅನುಕರಣೆಯ ಮೂಲಕ
- ಮಕ್ಕಳ ಕಲಿಕೆ ಬಲಗೊಳ್ಳುವ ದನ್ನು ಪ್ರತಿಪಾದಿಸುವ ನಿಯಮ - ಅಭ್ಯಾಸ ನಿಯಮ
- ಒಂದು ಭಾಷೆಯನ್ನು ಕಲಿಯಬೇಕಾದರೆ ಮೊದಲು ನಾವು - ಭಾಷೆಯ ಧ್ವನಿಗಳನ್ನು ಗುರುತಿಸುವಂತಾಗಬೇಕು.
- ಭಾಷಾ ಬೋಧನೆಯ ಪ್ರಧಾನ ಉದ್ದೇಶ - ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು.
- ಭಾಷಾ ಪ್ರಯೋಗ ಶಾಲೆ ಎಂದು ಇದನ್ನು ಕರೆಯುತ್ತಾರೆ - ವಿದ್ಯುನ್ಮಾನ ಬೋಧನೋಪಕರಣ ಗಳಿಂದ ಕೂಡಿದ ಕೊಠಡಿ.
- ಭಾಷಾ ಬೋಧನೆಗೆ ಉತ್ತಮ ಕಲಿಕಾ ಬೋಧನಾ ಉಪಕರಣಗಳು - ದೃಕ್ ಶ್ರವಣೋಪಕರಣಗಳು.



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

KARNATAKA ACADEMY 9980877296

- ಯಶಸ್ವಿ ತರಗತಿ ಪ್ರಕ್ರಿಯೆಗೆ ಸೂಕ್ತವಾದ ಚಟುವಟಿಕೆ ಹಂತಗಳು ಕ್ರಮಬದ್ಧ ಜೋಡಣೆ
    1. ಪೂರ್ವ ಸಿದ್ಧತಾ ಹಂತ
    2. ಕಲಿಕಾ ಪೂರಕ ಹಂತ
    3. ಕಲಿಕಾಂಶ ಹಂತ
    4. ಅಭ್ಯಾಸ ಹಂತ
    5. ಬಳಕೆ ಹಂತ
    6. ಮೌಲ್ಯಮಾಪನ ಹಂತ
- ಭಾಷಾ ಬೋಧಕನು ಉತ್ತಮವಾಗಿ ಬೋಧಿಸಿದರೂ, ಕೆಲವು ವಿದ್ಯಾರ್ಥಿಗಳಿಗೆ ಅವರ ಬೋಧನೆ ದೋಷಪೂರಿತವಾಗಿ ಕಂಡು ಬರಲು ಕಾರಣ - ಕೇಳುವ ವಿಷಯ ಅಥವಾ ಹೇಳುವ ವ್ಯಕ್ತಿ ಕುರಿತು ಪೂರ್ವಾಗ್ರಹ ಪೀಡನೆಯಿಂದ ಕೇಳುವುದು
- ಶಿಕ್ಷಣದಲ್ಲಿ ಭಾಷೆಯು ಮಹತ್ವದ ಪಾತ್ರ ವಹಿಸುತ್ತದೆ ಎಂದರೆ - ಮಕ್ಕಳ ಸಾಮಾಜಿಕ, ಭಾವನಾತ್ಮಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಸಹಾಯಕಾರಿ.
- ಅಗಸ, ಗುಣನಂದಿ, ಪಂಪ, ರನ್ನ, ಬಸವಣ್ಣ, ಅಕ್ಕಮಹಾದೇವಿ, ಕುವೆಂಪು, ಬೇಂದ್ರೆಯವರನ್ನು ಭಾಷಾ ಶಿಕ್ಷಕ ಪರಿಚಯಿಸುವುದು ಆದರೆ - ಕನ್ನಡ ಭಾಷೆಯ ಪ್ರಾಚೀನತೆ ಮತ್ತು ವಿವಿಧ ಹಂತಗಳ ಸಂಪೂರ್ಣ ಪರಿಚಯವಿರಬೇಕು.
- ಮಾತೃಭಾಷಾ ಬೋಧನೆಯು ನಡೆಯುವ ಕ್ರಮ - ಮಾತೃಭಾಷೆ ಬೋಧನೆಯು ನಿರ್ದಿಷ್ಟವಾದ, ಉದ್ದೇಶಪೂರ್ವಕ ಹಾಗೂ ಪ್ರಜ್ಞಾಪೂರ್ವಕ ಕ್ರಿಯೆ.
- ವಿದ್ಯಾರ್ಥಿಯು ಭಾಷಾ ಕೌಶಲಗಳನ್ನು ಕಲಿಯುವ ಆರಂಭಿಕ ಹಂತಗಳಲ್ಲಿ ಅನುಸರಿಸಬೇಕಾದ ನಿಯಮಗಳು - ಸಿದ್ಧತೆ ಮತ್ತು ಅನುಕರಣೆ ನಿಯಮ
- ಭಾಷಾ ಬೋಧನೆಯ ನಂತರ ಘಟಕದ ಕಲಿಕಾ ಪ್ರಕ್ರಿಯೆಯನ್ನು ಮೌಲ್ಯಮಾಪನ ಮಾಡಿ ಪರಿಹಾರ ಬೋಧನೆ ಕೈಗೊಳ್ಳಬೇಕಾಗಿರುವುದು - ವಿದ್ಯಾರ್ಥಿಗಳ ಸಾಧನೆ, ದೌರ್ಬಲ್ಯಗಳನ್ನು ಗುರುತಿಸಿ, ಸಾಧನೆಯಲ್ಲಿ ಹಿಂದುಳಿದವರಿಗೆ
- ಧ್ವನಿ ಮತ್ತು ಮಾನಸಿಕ ಕ್ರಿಯೆ ಯನ್ನು ಬಿಂಬಿಸುವ ಭಾಷಾ ಕೌಶಲ - ಓದುಗಾರಿಕೆಯ ಕೌಶಲ
- ಮಾತು, ಓದು ಮತ್ತು ಬರಹ ಉತ್ತಮ ವಾಗಬೇಕಾದರೆ ಈ ಕೌಶಲ ಬಲಗೊಳ್ಳಬೇಕು - ವಾಕ್ಯ ರಚನೆ

KARNATAKA ACADEMY 9980877296



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

- ಇದು ಭಾಷಾ ಕೌಶಲಗಳಲ್ಲಿ ಶಾಶ್ವತ ರೂಪ – ಬರವಣಿಗೆ
- ಭಾಷಾ ತರಗತಿಯಲ್ಲಿ ಒತ್ತು ನೀಡಬೇಕಾಗಿರುವುದು - ಸಹಜ ಸಂವಹನ ಮತ್ತು ಅಭಿವೃದ್ಧಿಗೆ.
- ಮಗು ಸಹಜವಾಗಿ ಕುಟುಂಬದ ಸದಸ್ಯರ ಅಂತರಕ್ರಿಯೆ ಯೊಂದಿಗೆ ಮಾತೃಭಾಷೆಯನ್ನು ಕಲಿಯುತ್ತದೆ ಈ ಹೇಳಿಕೆಯನ್ನು ಸಮರ್ಥಿಸುವ ನಿಯಮ - ಜೀವಂತ ಸಂದರ್ಭಗಳಲ್ಲಿ ಭಾಷೆ ಕಲಿಸುವ ನಿಯಮ
- ಆಲಿಸುವಿಕೆ ಮತ್ತು ಕೈಬರಹದಲ್ಲಿ ಏಕಕಾಲದಲ್ಲಿ ಉತ್ತಮಪಡಿಸಲು ಯೋಗ್ಯವಾದ ಚಟುವಟಿಕೆ - ಉಕ್ತ ಲೇಖನ ಬರೆಯುವ ಅಭ್ಯಾಸ
- ಮಕ್ಕಳಿಗೆ ಓದು ಕಲಿಸುವ ವೈಜ್ಞಾನಿಕ ಪದ್ಧತಿ - ವಾಕ್ಯ ಮಾಲ ಪದ್ಧತಿ
- ವಿದ್ಯಾರ್ಥಿಗಳ ಕಲಿಕೆಯನ್ನು ಪ್ರತಿ ಹಂತದಲ್ಲಿ ಪರಿಶೀಲಿಸುತ್ತಾ ಕಲಿಸಲು ಸಹಾಯಕವಾದ ಬೋಧನಾ ಪದ್ಧತಿ - ಪ್ರಶ್ನೋತ್ತರ ಪದ್ಧತಿ
- ಕನ್ನಡ ಭಾಷೆಯ ವಾಕ್ಯರಚನೆಯಲ್ಲಿ ಸಹಜವಾದದ್ದು - ಕರ್ತರಿ ಪ್ರಯೋಗ
- ಸ್ವತಂತ್ರ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸಲು ಸೂಕ್ತ ಚಟುವಟಿಕೆಗಳು – ಕಥೆ, ಪ್ರಬಂಧ ಹಾಗೂ ಸಾರಾಂಶ ಬರವಣಿಗೆಗಳು
- ಭಾಷಾ ಕಲಿಕೆಯಲ್ಲಿ ಕಥನ ಪದ್ಧತಿಯನ್ನು ಅನುಸರಿಸುವುದರಿಂದ ವಿದ್ಯಾರ್ಥಿಗಳಲ್ಲಿ ಮೂಡಿಬರುವ ಭಾಷಾಸಾಮರ್ಥ್ಯ - ಭಾವರೂಪ ಅಭಿವ್ಯಕ್ತಿ
- ಭಾಷೆ ಹಾಗೂ ವಿಷಯ ತಿಳುವಳಿಕೆಯನ್ನು ವೃದ್ಧಿಸಲು ಪಠ್ಯಪುಸ್ತಕಕ್ಕೆ ಪೂರಕ ಪರಿಕರ - ಸಂಪನ್ಮೂಲ ಪುಸ್ತಕ
- ಭಾಷಾ ಕೌಶಲಗಳನ್ನು ಸ್ವಯಂ ಅಭ್ಯಾಸಗಳನ್ನು ಕಲಿಯಲು ನೆರವಾಗುವ ಸಾಧನ - ಭಾಷಾ ಪ್ರಯೋಗಾಲಯ
- ಭಾಷಾ ಕೌಶಲ್ಯಗಳ ಕಲಿಕೆಯನ್ನು ಈ ರೀತಿ ನಿರ್ದೇಶಿಸಬೇಕು - ಭಾಷಾ ಕೌಶಲಗಳನ್ನು ಸಮನ್ವಯತೆ ಹಾಗೂ ಸುರುಳಿ ಕ್ರಮದಲ್ಲಿ ಬೋಧಿಸುವುದು.
- ಓದು ಬರಹಗಳನ್ನು ಕಲಿಸುವ ಆರಂಭಿಕ ಹಂತಗಳಲ್ಲಿ ಪಾಲಿಸಬೇಕಾದ ಸೂಕ್ತ ನಿಯಮಗಳು - ಅನುಕರಣೆ ಮತ್ತು ಅಭ್ಯಾಸ
- ಒಂದು ಉತ್ತಮ ಭಾಷಾ ಪಠ್ಯ ಪುಸ್ತಕದ ಸೂಕ್ತವಲ್ಲದ ಅಂಶ - ಪಡಿಯಚ್ಚು ರೀತಿಯ ಮಾಹಿತಿ ಆಧಾರಿತ ಪಠ್ಯಗಳು



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

- ಮಕ್ಕಳ ಭಾಷಾಬಳಕೆಯ ಸಂದರ್ಭಗಳಲ್ಲಿ ಕಂಡುಬರುವ ಸರಿ-ತಪ್ಪುಗಳನ್ನು ಗುರುತಿಸಿ ಅಗತ್ಯ ಮಾರ್ಗದರ್ಶನ ಗಳೊಂದಿಗೆ ಕಲಿಸಬೇಕು ಈ ಮಾತಿನಲ್ಲಿ ಆಗಿರುವ ಮನೋವೈಜ್ಞಾನಿಕ ನಿಯಮ - ಪುನರ್ಬಲನ ನಿಯಮ
- ಮಾತನಾಡುವ ಭಾಷೆಯ ಪ್ರಮುಖ ಲಕ್ಷಣ - ಸಹಜ ಹಾಗೂ ಸಾರಸಂಗ್ರಹ ರೀತಿಯ ಅಭಿವ್ಯಕ್ತಿ
- ಲಿಪಿಗಳು ಕಣ್ಣಿನ ಮೂಲಕ ಮನಸ್ಸನ್ನು ಪ್ರವೇಶಿಸಿ ಅರ್ಥಪೂರ್ಣ ಧ್ವನಿಯಾಗಿ ಹೊರಹೊಮ್ಮುವುದು ಇದನ್ನು ಸಮರ್ಥಿಸುವ ಕೌಶಲ – ಓದುಗಾರಿಕೆ
- ವಿದ್ಯಾರ್ಥಿಗಳ ಸ್ವತಂತ್ರ ಓದು ಹಾಗೂ ಸ್ವಯಂ ಅಧ್ಯಯನಕ್ಕೆ ಪೂರಕವಾಗುವ ಸೌಲಭ್ಯ - ಶಾಲಾ ಗ್ರಂಥಾಲಯ
- ಭಾಷಾ ತರಗತಿಯ ಎಲ್ಲಾ ಹಂತಗಳಲ್ಲಿ ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಬಹುಪಯೋಗಿ ಬಳಕೆಯಾಗುವ ಉಪಕರಣ – ಕಪ್ಪುಹಲಗೆ
- ಭಾಷೆಯ ಮೇಲಿನ ಪ್ರಭುತ್ವ ಸಾಧನೆ ಎಂದರೆ ಮುಖ್ಯವಾಗಿ ಇವುಗಳನ್ನು ಹೊಂದುವುದೇ ಆಗಿದೆ – ಭಾಷಾ ಬಳಕೆಯ ವಿವಿಧ ಕೌಶಲಗಳು
- ಕಲಿಕೆ ಸ್ವಾಧೀನ ಗೊಳ್ಳಲು ಈ ಅಂಶಗಳು ಬಲು ಮುಖ್ಯ – ಭಾಷಾ ಕೌಶಲಗಳ ಗಳಿಕೆ ಮತ್ತು ಬಳಕೆ

## ಬೋಧನಾ ಪದ್ಧತಿಗಳು

- ಶ್ರಮ ಪರಿಹಾರ ಸಿದ್ಧಾಂತ ಪ್ರತಿಪಾದಕರು – ನೋಯಿರಿ
- ಅನುಗಮನ ಪದ್ಧತಿಯ ಪ್ರತಿಪಾದಕರು – ಫ್ರಾನ್ಸಿಸ್ ಬೇಕನ್
- ಮಕ್ಕಳಿಗೆ ಓದು ಕಲಿಸುವ ವೈಜ್ಞಾನಿಕ ಪದ್ಧತಿ – ವಾಕ್ಯಮಾಲಾ ಪದ್ಧತಿ
- ವಿದ್ಯಾರ್ಥಿಗಳ ಕಲಿಕೆಯನ್ನು ಪ್ರತಿಹಂತದಲ್ಲಿ ಪರಿಶೀಲಿಸುತ್ತಾ ಕಲಿಸಲು ಸಹಾಯಕವಾಗುವ ಬೋಧನಾ ಪದ್ಧತಿ - ಪ್ರಶ್ನೋತ್ತರ ಪದ್ಧತಿ
- ಸಾಕ್ರೆಟಿಸ್ ಪದ್ಧತಿ ಎಂದೇ ಹೆಸರಾಗಿರುವ ಬೋಧನಾ ಪದ್ಧತಿ - ಪ್ರಶ್ನೋತ್ತರ ಪದ್ಧತಿ
- ನಿರ್ದಿಷ್ಟವಾದ ವಿಷಯಗಳಿಂದ ಒಂದು ಸಾಮಾನ್ಯ ತೀರ್ಮಾನದ ಕಡೆ ಸಾಗುವ ಪದ್ಧತಿ - ಅನುಗಮನ ಪದ್ಧತಿ
- ಮಾಡಿರಲಿ, ಆಡಿರಲಿ ಎಂಬ ತತ್ವವನ್ನು ಆಧರಿಸಿದ ಬೋಧನಾ ಪದ್ಧತಿ - ಕ್ರೀಡಾ ಪದ್ಧತಿ



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

- ಮಾತ್ರ ಭಾಷಾ ಬೋಧನಾ ಪದ್ಧತಿ ಯಲ್ಲಿ ಮೂರ್ತದಿಂದ ಅಮೂರ್ತದ ಕಡೆಗೆ ಮತ್ತು ನಿರ್ದಿಷ್ಟದಿಂದ ಸಾಮಾನ್ಯದ ಕಡೆಗೆ ಸಾಗುವ ಪದ್ಧತಿ - ಅನುಗಮನ ಪದ್ಧತಿ
- ಭಾಷೆಯ ಕಲಿಕೆಯಲ್ಲಿ ವಾಕ್ಯ ಪದ್ಧತಿ ಎಂದರೆ - ಅರ್ಥಪೂರ್ಣ ವಾಕ್ಯಗಳನ್ನು ಮಕ್ಕಳಿಗೆ ಪರಿಚಯಿಸುತ್ತಾ ಓದು ಕಲಿಸುವುದು.
- ಕಲಿಕಾ ಪ್ರಕ್ರಿಯೆಯೊಂದಿಗೆ ವ್ಯಾಕರಣವನ್ನು ಸಮನ್ವಯಗೊಳಿಸಿ ಕಲಿಸುವುದು - ಕ್ರಿಯಾತ್ಮಕ ವ್ಯಾಕರಣ
- ಸಂಜ್ಞಾ ಭಾಷಾ ವಾದವನ್ನು ಪ್ರತಿಪಾದಿಸಿದವರು – ವೂಂಟ್

## ಮೌಲ್ಯಮಾಪನ

- ಬೋಧನೆ ಮತ್ತು ಕಲಿಕೆಯ ಪ್ರತಿಯೊಂದು ಹಂತದಲ್ಲಿ ಪ್ರಕ್ರಿಯೆಗಳನ್ನು ಸ್ವೀಕರಿಸುತ್ತಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸದಾ ಎಚ್ಚರಿಕೆಯಿಂದಿರುವ ಮೌಲ್ಯಮಾಪನ - ನಿರಂತರ ಮೌಲ್ಯಮಾಪನ
- ವಿದ್ಯಾರ್ಥಿಗಳ ಸಾಧನೆಯನ್ನು ನಿರಂತರ ಮೌಲ್ಯಮಾಪನ ಮೂಲಕ ಅಳೆಯುವ ಪರೀಕ್ಷೆಗಳನ್ನು ಶೈಕ್ಷಣಿಕವಾಗಿ ಕರೆಯುವುದು - ಘಟಕ ಪರೀಕ್ಷೆ
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಮಾಡುವ ಉದ್ದೇಶವೆಂದರೆ - ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆ, ಸಹಪಠ್ಯ ಚಟುವಟಿಕೆ ಮತ್ತು ಸಹಜ ವರ್ತನೆಗಳನ್ನು ನಿರಂತರವಾಗಿ ವ್ಯಾಪಕವಾಗಿ ಗಮನಿಸುವುದು.
- ಸಂಕಲನಾತ್ಮಕ ಮೌಲ್ಯಮಾಪನ ವೆಂದರೆ - ಶಿಕ್ಷಕರು ಕಲಿಕೆಯನ್ನು ಅನುಕೂಲಿಸುತ್ತಾ ಒಂದು ತಾರ್ಕಿಕ ಅಂತ್ಯ ದಲ್ಲಿ ಕಲಿಕೆಯನ್ನು ಪರೀಕ್ಷೆ, ಚಿತ್ರ, ಪ್ರದರ್ಶನ, ಚರ್ಚೆ, ಯೋಜನೆ ಇತ್ಯಾದಿ ಚಟುವಟಿಕೆಗಳ ಮೂಲಕ ಮಾಪಿಸಿ ಕಲಿಕಾ ಪ್ರಗತಿಯನ್ನು ದಾಖಲಿಸುವುದು.
- ವಿದ್ಯಾರ್ಥಿಗಳ ಕಲಿಕಾ ದೌರ್ಬಲ್ಯಗಳನ್ನು ನಿಖರವಾಗಿ ಪತ್ತೆ ಹಚ್ಚಲು ಕೈಗೊಳ್ಳುವ ಪರೀಕ್ಷೆ - ನೈದಾನಿಕ ಪರೀಕ್ಷೆ
- ಪಠ್ಯದ ಬಗ್ಗೆ ಸ್ಥೂಲವಾದ ಗ್ರಹಿಕೆಯನ್ನು ಪರೀಕ್ಷಿಸಲು ಕೇಳಬಹುದಾದ ಪ್ರಶ್ನೆಗಳು – ಪುನರಾವರ್ತನೆಯ ಪ್ರಶ್ನೆಗಳು
- ಪರಿಹಾರ ಬೋಧನೆಯ ಸೂಕ್ತ ಅರ್ಥ - ಕಲಿಕೆಯ ನ್ಯೂನ್ಯತೆಯ ಆಧಾರದಲ್ಲಿ ಕೈಗೊಳ್ಳುವ ವಿಶಿಷ್ಟ ಬೋಧನೆ.



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

KARNATAKA ACADEMY 9980877296

- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಆಶಯದಲ್ಲಿ ಮೌಲ್ಯಮಾಪನವು ಹೇಗಿರಬೇಕೆಂದು ಅಂಶವನ್ನು ಒತ್ತಿ ಹೇಳಿದೆ – ಕಲಿಕಾ ಸಾಧನ
- ಓದುವ ಪರಿಹಾರಾತ್ಮಕ ಕಾರ್ಯದಲ್ಲಿ ಈ ರೀತಿಯಾದ ಪರಿಹಾರಾತ್ಮಕ ಚಟುವಟಿಕೆಯನ್ನು ನಡೆಸುವುದು ಹೆಚ್ಚು ಸೂಕ್ತ - ವಿಶೇಷ ತರಗತಿ, ವಿಶೇಷ ಶಿಕ್ಷಕರಿಂದ, ಓದುಗಾರಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ
- ರೂಪನಾತ್ಮಕ ಮೌಲ್ಯಮಾಪನ ಎಂದರೆ - ಮಗುವಿನ ಪಠ್ಯ, ಸಹಪಠ್ಯ ಮತ್ತು ಸಹಜ ವರ್ತನೆಗಳನ್ನು ನಿರಂತರ ಹಾಗೂ ವಿವಿಧ ಆಯಾಮಗಳಲ್ಲಿ ಅರ್ಥೈಸುವುದು.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಆಶಯ - ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆ ಸಹಪಠ್ಯ ಚಟುವಟಿಕೆ ಮತ್ತು ಸಹಜ ವರ್ತನೆಗಳನ್ನು ನಿರಂತರವಾಗಿ ಗಮನಿಸುವುದು.
- ಪರಿಹಾರ ಬೋಧನೆ ಕೈಗೊಳ್ಳಬೇಕಾಗಿರುವುದು - ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ'ದ ಪ್ರಧಾನ ಉದ್ದೇಶ - ಮಕ್ಕಳನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು.

## ಗದ್ಯ ಮತ್ತು ಪದ್ಯ ಬೋಧನೆ

- ಪ್ರಬಂಧ ಬೋಧನೆ ಉದ್ದೇಶ – ಸ್ವ - ಅಭ್ಯರ್ಥಿಯನ್ನು ಪೋಷಿಸಿ ಬೆಳೆಸುವುದು.
- ಪದ್ಯವನ್ನು ರಾಗವಾಗಿ ಭಾವಪೂರ್ಣವಾಗಿ ಹಾಡುವ ಕ್ರಮವನ್ನು ಅಭ್ಯಾಸ ಮಾಡಿಸುವುದರಿಂದ ವಿದ್ಯಾರ್ಥಿಗಳಲ್ಲಿ ಈ ಸಾಮರ್ಥ್ಯ ಗಟ್ಟಿಯಾಗುತ್ತದೆ - ರಸಸ್ವಾದನೆ ಮತ್ತು ಸೌಂದರ್ಯಪ್ರಜ್ಞೆ
- ಪದ್ಯ ಬೋಧನೆಯ ಮುಖ್ಯ ಗುರಿಗಳಲ್ಲಿ ಇದು ಒಂದು - ರಸಸ್ವಾದನೆ ಮತ್ತು ಸೌಂದರ್ಯ ಪ್ರಜ್ಞೆ ಬೆಳೆಸುವುದು.
- ಗದ್ಯ ಬೋಧನೆ ಮುಖ್ಯ ಉದ್ದೇಶ - ಓದು-ಬರಹ, ಗ್ರಹಿಕೆ ಹಾಗೂ ಸ್ವತಂತ್ರ ಆಲೋಚನೆ
- ಪದ್ಯ ಬೋಧನೆಯ ಪ್ರಮುಖ ಉದ್ದೇಶ - ಪದ್ಯದ ರಚನಾ ವಿನ್ಯಾಸ ಹಾಗೂ ಕವಿಯ ಭಾವನೆಗಳನ್ನು ಅರಿತು ಸ್ಪಂದಿಸುವುದು.
- ಪದ್ಯ ಬೋಧನೆಯಲ್ಲಿ ಪರಿಣಾಮಕಾರಿ ಕಲಿಕೆ ಯಾಗಲು ಇದು ಕಾರಣವಾಗುತ್ತದೆ - ಪದ್ಯದ ಗಾಯನ ಮತ್ತು ಭಾವಪೂರ್ಣ ವಿವರಣೆಯಿಂದ
- ಪದ್ಯದ ಒಳಮೈ ಲಕ್ಷಣಗಳು ಪ್ರತಿಬಿಂಬಿಸುವ ಗುಣ - ಕವಿಯ ಆಶಯ ಮತ್ತು ಭಾವನೆ



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

- ಸ್ಥೂಲ ಸೂಕ್ಷ್ಮ , ಗ್ರಹಿಕೆಯೊಂದಿಗೆ ರಸಭಾವಗಳ ಪ್ರಶಂಸೆ, ಮತ್ತು ಅಲಂಕಾರ, ಛಂದಸ್ಸನ್ನು ಒಳಗೊಂಡ ಬೋಧನೆ – ಕಾವ್ಯ ಬೋಧನೆ
- ಛಂದೋಬದ್ಧತೆ , ಪದಲಾಲಿತ್ಯ, ಪ್ರಾಸ ಮತ್ತು ಯತಿಗಳನ್ನು ಒಳಗೊಂಡ ಬೋಧನೆ – ಪದ್ಯ ಬೋಧನೆ
- ಪಠ್ಯದ ಅರ್ಥ ಗ್ರಹಿಕೆಯನ್ನು ಸೂಕ್ತವಾಗಿ ಸಮರ್ಥಿಸುವ ಹೇಳಿಕೆ - ಪಠ್ಯವನ್ನು ಸಮಗ್ರವಾಗಿ ಗ್ರಹಿಸಿ ಅರ್ಥೈಸಿಕೊಳ್ಳುವುದು.
- ಭಾಷಾ ಕಲಿಕೆಯಲ್ಲಿ ಕಥನ ಪದ್ಧತಿಯನ್ನು ಅನುಸರಿಸುವುದರಿಂದ ವಿದ್ಯಾರ್ಥಿಗಳಲ್ಲಿ ಮೂಡಿಬರುವ ಭಾಷಾಸಾಮರ್ಥ್ಯ - ಭಾವರೂಪ ಅಭಿವ್ಯಕ್ತಿ
- ಪದ್ಯ ಬೋಧನೆಯಲ್ಲಿ ರಸಾಸ್ವಾದನೆ ಉದ್ದೇಶಗಳ ಸಾಧನೆಗೆ ಪೂರಕವಲ್ಲದ ಚಟುವಟಿಕೆ - ಪದ್ಯವನ್ನು ಬಿಡಿಬಿಡಿಯಾಗಿ ವಿಶ್ಲೇಷಿಸುವುದು
- ಪದ್ಯವನ್ನು ಓದಿ ಅರ್ಥೈಸುವ ಸಾಮರ್ಥ್ಯವನ್ನು ಪರೀಕ್ಷಿಸಲು ಬಳಸುವ ಸಾಧನ - ಪಠ್ಯಾಧಾರಿತ ಪ್ರಶ್ನೆಗಳಿಗೆ ಉತ್ತರ ಹೇಳಿಸುವುದು.

## ಇನ್ನಿತರ ಪ್ರಮುಖ ಅಂಶಗಳು

- ಓದಿನಲ್ಲಿ ಹಿಮ್ಮರಳುವಿಕೆ ಉಂಟಾಗಲು ಕಾರಣ – ಅವಧಾನ, ಏಕಾಗ್ರತೆ ಮತ್ತು ಅರ್ಥಗ್ರಹಣ ಇಲ್ಲದಿರುವುದು
- ತರಗತಿಯಲ್ಲಿ ಶಿಕ್ಷಕರು ಪಾಠ ಮಾಡುವಾಗ ಕುವೆಂಪು ರವರ ಬಾಲ್ಯ ಜೀವನ ಮತ್ತು ಸಾಧನೆಗಳು ವಿಡಿಯೋ ತೋರಿಸಿ ಮಹತ್ವವಿರುವುದು ಯಾವ ಗಳಿಗೆ ಉದಾಹರಣೆ - ದೃಕ್ ಶ್ರವಣ ಉಪಕರಣಗಳು
- ಒಂದು ನಿರ್ದಿಷ್ಟ ತರಗತಿಯ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ಉದ್ದೇಶಗಳಿಗೆ ಅನುಗುಣವಾಗಿ, ನಿರ್ದಿಷ್ಟ ವಿಷಯಗಳನ್ನು ಅರ್ಥ ಬದ್ಧವಾಗಿ, ವ್ಯವಸ್ಥಿತವಾಗಿ ಮತ್ತು ತಾರ್ಕಿಕವಾಗಿ ಜೋಡಿಸಿ ಪರಿಣಿತರು ಎಚ್ಚರಿಕೆಯಿಂದ ತಯಾರಿ ಮಾಡಿರುವುದು – ಪಠ್ಯಪುಸ್ತಕ
- ವರ್ಗಕೋಣೆಯಲ್ಲಿ ಉದ್ಭವಿಸುವ ತಕ್ಷಣದ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಶಿಕ್ಷಕರು ಕೈಗೊಳ್ಳಬೇಕಾದ ಸಂಶೋಧನೆ – ಕ್ರಿಯಾ ಸಂಶೋಧನೆ



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

- ಹಿಂದೆ ಜರುಗಿದ ಘಟನೆಗಳನ್ನು ಮಾತ್ರವಲ್ಲದೆ ವರ್ತಮಾನದ ಹಾಗೂ ಭವಿಷ್ಯದ ಘಟನೆಗಳನ್ನು ಒಳಗೊಂಡಿರುವ ಪಠ್ಯಪುಸ್ತಕ ಈ ತತ್ವವನ್ನು ಪ್ರತಿಬಿಂಬಿಸುತ್ತದೆ – ಸಮಕಾಲಿನ ತತ್ವ
- ಸುಮಧುರ ಗೀತೆಗಳು, ಕವಿಗಳ ಭಾಷಣಗಳು ಮತ್ತು ಸಂದರ್ಶನಗಳನ್ನು ತರಗತಿಯಲ್ಲಿ ಆಲಿಸಲು ಬಳಸಬಹುದಾದ ಸಂಪನ್ಮೂಲ ಸಾಧನ – ಧ್ವನಿಸುರುಳಿ
- ಭಾವಪೂರ್ಣ ಮಾತುಗಾರಿಕೆ ಸಾಮರ್ಥ್ಯ ಬೆಳೆಸಲು ಸೂಕ್ತವಾದ ಚಟುವಟಿಕೆ - ಕಥೆ ನಿರೂಪಣೆ
- ವಿದ್ಯಾರ್ಥಿಗಳ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲು ಇದು ಸೂಕ್ತ ವಿಧಾನ - ಪ್ರಬಂಧ ಮಾದರಿ ಪ್ರಶ್ನೆಗಳು
- ಕಿರು ಪರೀಕ್ಷೆಗಳು ಹಾಗೂ ವಾರ್ಷಿಕ ಪರೀಕ್ಷೆಗಳಲ್ಲಿ ಅತ್ಯಂತ ಕಡಿಮೆ ಸಾಧನೆ ತೋರುವ ವಿದ್ಯಾರ್ಥಿಗಳಿಗೆ ಅಳವಡಿಸಬೇಕಾದ ಕ್ರಮ - ಪರಿಹಾರ ಬೋಧನೆ
- ವಿದ್ಯಾರ್ಥಿಗಳ ಮೌಖಿಕ ಅಭಿವ್ಯಕ್ತಿ ಸಾಮರ್ಥ್ಯವನ್ನು ಮಾಪನ ಮಾಡಲು ಬಳಸುವ ಸಾಧನ - ಪಠ್ಯ ಆಧಾರಿತ ಪ್ರಶ್ನೆಗಳನ್ನು ಕೇಳುವುದು
- ಆರಂಭದಲ್ಲಿ ಓದು ಕಲಿಸಲು ಬಳಸಬಹುದಾದ ಸೂಕ್ತ ಸಾಧನ - ವರ್ಣಮಾಲೆಗಳ ಚಾರ್ಟ್ / ಚಿತ್ರಸಹಿತ ವಾಕ್ಯಗಳ ಸಾಧನ
- ಪ್ರಾಥಮಿಕ ಹಂತದಲ್ಲಿ ಕಂಡುಬರುವ ಭಾಷಾ ದೋಷಗಳನ್ನು ಅದೇ ಹಂತದಲ್ಲಿ ಪರಿಹರಿಸಬೇಕಾಗಿದೆ ಏಕೆಂದರೆ - ಈ ಹಂತದಲ್ಲಿ ದೋಷಗಳು ಉಳಿದರೆ ಕ್ರಮೇಣ ಈ ದೋಷಗಳು ವಿಸ್ತಾರಗೊಳ್ಳುತ್ತದೆ.
- ವಿದ್ಯಾರ್ಥಿಯು ಪಠ್ಯವನ್ನು ಓದಿ ಗ್ರಹಿಸುವ ಪ್ರಕ್ರಿಯೆಯಲ್ಲಿ ಸಹಕಾರಿಯಾಗುವ ಅಂಶ - ಪದ್ಯದ ಪ್ರತಿ ಪದವನ್ನು ಪ್ರತ್ಯೇಕವಾಗಿ ವಿಶ್ಲೇಷಿಸುವುದು
- ವಿದ್ಯಾರ್ಥಿಗಳ ಸ್ವತಂತ್ರ ಓದು ಹಾಗೂ ಸ್ವಯಂ ಅಧ್ಯಯನಕ್ಕೆ ಪೂರಕವಾಗುವ ಸೌಲಭ್ಯ - ಶಾಲಾ ಗ್ರಂಥಾಲಯ
- ಕನ್ನಡ ಭಾಷೆಯ ಸ್ಥಾನಾಂತರ ಸ್ವೀಕರಣೆ ಮೂಲಕ ರೂಪಿಸಿಕೊಂಡಿರುವ ಪದ -ತೆರೆದ ಅಂಚೆ
- ಅರ್ಥ ಗ್ರಹಿಕೆ ಹಾಗೂ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯವನ್ನು ಮಾಪನ ಮಾಡುವ ಸಾಧನ - ಪದ್ಯದ ಸಾರಾಂಶ ಬರೆಯುವ ಪ್ರಶ್ನೆಗಳು



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296

- ಪರಿಹಾರ ಬೋಧನೆಯ ಸೂಕ್ತ ಅರ್ಥ - ಕಲಿಕೆಯ ನ್ಯೂನ್ಯತೆಯ ಆಧಾರದಲ್ಲಿ ಕೈಗೊಳ್ಳುವ ವಿಶಿಷ್ಟ ಬೋಧನೆ.
- ಕಲಿಕೆ ಸ್ವಾಧೀನ ಗೊಳ್ಳಲು ಅಂಶಗಳು ಬಲು ಮುಖ್ಯ - ಭಾಷಾ ಕೌಶಲ್ಯಗಳ ಗಳಿಕೆ ಮತ್ತು ಬಳಕೆ
- ಓದುವ ಪರಿಹಾರಾತ್ಮಕ ಕಾರ್ಯದಲ್ಲಿ ಈ ರೀತಿ ಆದ ಪರಿಹಾರಾತ್ಮಕ ಚಟುವಟಿಕೆಯನ್ನು ನಡೆಸುವುದು ಹೆಚ್ಚು ಸೂಕ್ತ - ವಿಶೇಷ ತರಗತಿ, ವಿಶೇಷ ಶಿಕ್ಷಕರಿಂದ, ಓದುಗಾರಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ
- ಕ್ರಿಯಾತ್ಮಕ ವ್ಯಾಕರಣ ಬೋಧನೆ ಮುಖ್ಯಲಕ್ಷಣ - ಭಾಷೆಯ ಜೊತೆಯಲ್ಲಿಯೇ ಪ್ರಯೋಗದ ಮೂಲಕ ವ್ಯಾಕರಣ ಕಲಿಕೆ.
- ಬಹುಭಾಷಾ ಮಕ್ಕಳಿರುವ ತರಗತಿಯಲ್ಲಿ ಭಾಷಾ ಶಿಕ್ಷಕ ಹೊಂದಬೇಕಾದ ಅಪೇಕ್ಷಿತ ಧೋರಣೆ - ಬಹುಭಾಷೆ ತರಗತಿಯ ಭಾಷಾ ಕಲಿಕೆ ಸಂಪನ್ಮೂಲ ಎಂದು ಭಾವಿಸುವುದು.
- ಭಾಷಾ ಕಲಿಕೆಯ ಅನುಕ್ರಮಣಿಕೆಯ ತತ್ವದ ಅನ್ವಯ ಸರಿಯಾದ ಕಲಿಕೆ - ಮಾತುಗಾರಿಕೆ ಕೌಶಲ ದ ನಂತರ ಓದುವ ಕೌಶಲದ ಕಲಿಕೆ
- ಉತ್ತಮ ಮಾತುಗಾರಿಕೆ ಪ್ರಮುಖ ಲಕ್ಷಣಗಳು
    1. ಸ್ಪಷ್ಟವಾದ ಉಚ್ಚಾರಣೆ ಯೊಂದಿಗೆ ಸರಾಗವಾಗಿ ಮಾತನಾಡುವುದು
    2. ಮಾತಿನ ಧಾಟಿಯಲ್ಲಿ ಏರಿಳಿತಗಳೊಂದಿಗೆ ಮಾತನಾಡುವುದು.
    3. ಅರ್ಥಪೂರ್ಣವಾಗಿ ವ್ಯಾಕರಣಬದ್ಧವಾಗಿ ಮಾತನಾಡುವುದು.

ನಿಮ್ಮ ಯಶಸ್ಸು : ನಮ್ಮ ಗುರಿ



ಮಾರ್ಗದರ್ಶನ ನಮ್ಮದು : ಯಶಸ್ಸು ನಿಮ್ಮದು



DOWNLOAD KARNATAKA ACADEMY APP – CONTACT – Mrs. IMAMSAB MULTANI 9980877296